SEVA BHARATHI
सेवा ही परमो धर्मः

ಸಂಪುಟ : 06
ಸಂಚಿಕೆ : 06

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e-ನ್ಯೂಸ್ ಲೆಟರ್ – ಜೂನ್ 2025

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216




## ಬೆಂಗಳೂರಿನ ಕಮ್‌ಟ್ರೆಂಡ್ ಕಂಪೆನಿಯು ಸೇವಾಧಾಮಕ್ಕೆ ಭೇಟಿ

## ಉಚಿತ ಟೈಲರಿಂಗ್ ತರಬೇತಿಗಳು

## 32ನೇ ಶಿಬಿರದ ಸಮಾರೋಪ
## 33ನೇ ಶಿಬಿರದ ಉದ್ಘಾಟನೆ

## ಬೆಂಗಳೂರಿನ ಬಾಷ್ ಕಂಪೆನಿಯ ತಂಡವು ಸೇವಾನಿಕೇತನಕ್ಕೆ ಭೇಟಿ

## ಸೇವಾಭಾರತಿಯಿಂದ ಡಾ. ಧನಂಜಯ ಸರ್ಜಿ ಅವರ ಭೇಟಿ

## ಸ್ವ-ಉದ್ಯೋಗ ಬದುಕಿಗೆ ಹೊಸ ಆಯಾಮ ನೀಡಿದ 'ಸೇವಾಧಾಮ'. ಶಿರಸಿಯ ವಿನಯ್ ಭಟ್‌ರವರ ಯಶೋಗಾಥೆ

## ನಮ್ಮಿಂದಿಷ್ಟು

ಎಲ್ಲರಿಗೂ ನಮಸ್ಕಾರಗಳು,

ಬೆನ್ನೆಲುಬು ಮುರಿತಗೊಂಡವರಿಗೆ ಬೆನ್ನೆಲುಬಾಗಲು ಸಜ್ಜಾಗುತ್ತಿರುವ ಕಟ್ಟಡ ನಿರ್ಮಾಣ ವಾಗುತ್ತಿರುವುದು ವೇಗ ಪಡೆದುಕೊಂಡಿದೆ. ಇದರೊಂದಿಗೆ ಧನ ಕ್ರೋಢೀಕರಣವೂ ಭರದಿಂದ ಸಾಗುತ್ತಿದೆ.

ಈ ನಿಟ್ಟಿನಲ್ಲಿ ಮೊನ್ನೆ 4 ದಿನಗಳ ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಯ ಪ್ರವಾಸ ಉಲ್ಲೇಖನೀಯ ವಿಚಾರ. ಈ 4 ದಿನಗಳಲ್ಲಿ ವಿಶೇಷಚೇತನ ಶಾಲೆ, ಎರಡು ಮಠಗಳನ್ನು ಒಂದು ದೇವಸ್ಥಾನವನ್ನು, ಇಬ್ಬರು ಶಾಸಕರನ್ನು, ಐವರು ಫಲಾನುಭವಿಗಳನ್ನು, ಒಬ್ಬ ಹೊಸ ಫಲಾನುಭವಿಯನ್ನು. ಒಂದು ಸೊಸೈಟಿ ಹಾಗೂ ಒಬ್ಬ ಕೊಡುಗೈ ದಾನಿಯನ್ನು ಭೇಟಿ ಮಾಡಲಾಯಿತು. ಎಲ್ಲಾ ಫಲಾನುಭವಿಗಳ ಅನುಭವವೇ ಹಾಗೂ ಸಂತೋಷವೇ ನಮ್ಮೆಲ್ಲ ಸಂಘಟಿತ ಕಾರ್ಯಗಳಿಗೆ ಜಯ ಘೋಷ ಮಾಡಿದಂತಿತ್ತು. ಸೇವಾಧಾಮದ ಸೇವಾ ಕಾರ್ಯದಿಂದ ಅವರ ಬದುಕು ಬದಲಾದದ್ದೇ ಅವರ ಈ ಸಂತೋಷಕ್ಕೆ ಪಾರವಿಲ್ಲವಾಗಿತ್ತು.

ಬೈಂದೂರಿನ ಕಟ್ಟಡದ ಕೆಲಸ ಕಾರ್ಯಗಳು ಕೂಡಾ ಮುಂದುವರೆಯುತ್ತಿದೆ. ಒಟ್ಟಿನಲ್ಲಿ ಈ ಕಾರ್ಯಗಳು ನಮ್ಮ ಕಾರ್ಯವಿಸ್ತಾರಕ್ಕೆ ಮುನ್ನುಡಿಯಾಗಲಿದೆ.

ಇನ್ನೊಂದು ಪ್ರಮುಖ ವಿಷಯ ಶಿವಮೊಗ್ಗದಲ್ಲಿ ವಿಧಾನಪರಿಷತ್ ಸದಸ್ಯರಾದ ಡಾ. ಧನಂಜಯ ಸರ್ಜಿಯವರನ್ನು ಭೇಟಿ ಮಾಡಿದ್ದು. ಒಬ್ಬ ಸರಳ ಸಜ್ಜನ ವ್ಯಕ್ತಿ. ನಮ್ಮೆಲ್ಲ ಕಷ್ಟಗಳನ್ನು ಹಾಗೂ ಅದನ್ನು ಪರಿಹಾರ ಮಾಡುವ ನಿಟ್ಟಿನಲ್ಲಿ ತನ್ನ ಪಾತ್ರವಿದೆಯೆಂದು ನಮ್ಮ ಕಾರ್ಯವನ್ನು ಶ್ಲಾಘಿಸಿ ಶಾಲು, ಹಾರ ಹಾಕಿ ಗೌರವಿಸಿದ ಒಬ್ಬ ಮಹಾ ಜನಪ್ರತಿನಿಧಿ. ಅಷ್ಟೇ ಅಲ್ಲದೆ ತನ್ನ ಶಾಸಕರ ಅಭಿವೃದ್ಧಿ ನಿಧಿಯಡಿಯಲ್ಲಿ ಕಟ್ಟಡದ ನಿರ್ಮಾಣಕ್ಕಾಗಿ ರೂ. 5 ಲಕ್ಷಗಳನ್ನು ಮಂಜೂರು ಮಾಡಿ ತನ್ನ ಜವಾಬ್ದಾರಿಯನ್ನು ತೋರಿಸಿಕೊಟ್ಟವರು.

ಪ್ರತಿ ವರ್ಷ ನಮಗೆ ಸಹಕಾರ ನೀಡುವ ಬೆಂಗಳೂರಿನ ಕೆಮ್‌ಟ್ರೆಂಡ್ ಕೆಮಿಕಲ್ ಪ್ರೈವೇಟ್ ಲಿಮಿಟೆಡ್ ಕಂಪೆನಿಯ ಸಿಇಒ, ನಮ್ಮೆಲ್ಲರ ಹಿತೈಷಿ ಶ್ರೀ ರಾಜೇಶ್ ಫಡ್ಕೆಯವರ ತಂಡವು ಸೇವಾನಿಕೇತನ ಹಾಗೂ ಸೇವಾಧಾಮಕ್ಕೆ ಭೇಟಿ ನೀಡಿ ಸಂತೋಷ ವ್ಯಕ್ತಪಡಿಸಿ ಈ ವರ್ಷವೂ ಸಹಕಾರ ನೀಡುವ ವಿಶ್ವಾಸ ನೀಡಿತು.

ಶಿರಸಿಯ ಸುಬ್ರಹ್ಮಣ್ಯ ಹೆಗ್ಡೆಯವರು ಬೆನ್ನುಹುರಿ ಮುರಿತಗೊಂಡು ಆಂಬುಲೆನ್ಸ್‌ನಲ್ಲಿ ಬಂದು ಮೂರು ತಿಂಗಳಕಾಲ ಪುನಶ್ಚೇತನಗೊಂಡು ತಾನು ನಡೆದಾಡುವಂತೆ ಆಗಿರುವ ಸಂತೋಷಕ್ಕಾಗಿ ಅಕ್ಕಿ, ತೆಂಗಿನಕಾಯಿ ಹಾಗೂ ಕಟ್ಟಡಕ್ಕೆ ದೇಣಿಗೆಯನ್ನು ನೀಡಿ ಮನೆಗೆ ತೆರಳಿರುವಂತಹ ವಿದ್ಯಮಾನ ಎಲ್ಲರಿಗೂ ಮಾದರಿ ಹಾಗೂ ಅನುಕರಣೀಯ.



**ಸೇವಾ ಹೀ ಪರಮೋ ಧರ್ಮಃ**

ತಾಯಿ ಭಾರತಿಯ ಸ್ಮರಣೆಗಳೊಂದಿಗೆ,

ಇತಿ ತಮ್ಮವ,

**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)

ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |
| ಶ್ರೀ ಜಯರಾಜ್ ಸಾಲ್ಯಾನ್ | – ಟ್ರಸ್ಟಿ |
| ಶ್ರೀ ಪೃಥ್ವೀಶ್ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ವಿಜಯ ಕೊಡವೂರು
5. ಶ್ರೀ ಆದಿತ್ಯ ಕಲ್ಲೂರಾಯ
6. ಶ್ರೀ ಕಿರಣ್ ರಾಜ್ ಕೆ.

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಬೆಂಗಳೂರಿನ ಕೆಮ್‌ಟ್ರೆಂಡ್ ಕಂಪೆನಿಯು ಸೇವಾಧಾಮಕ್ಕೆ ಭೇಟಿ

ಬೆಂಗಳೂರಿನ ಕೆಮ್‌ಟ್ರೆಂಡ್ ಕಂಪೆನಿಯ ಸಿಇಒ ಶ್ರೀ ರಾಜೇಶ್ ಫಡ್ಕೆ, ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಮತ್ತು ಸೇಲ್ಸ್ ಮ್ಯಾನೇಜರ್ ಶ್ರೀ ರೋಮಿನ್ ಬೋಸ್ ಮತ್ತು ಶ್ರೀರಾಮ ರಾವ್ ಕುಮಾರ್‌ರವರು ಜೂನ್ 18 ರಂದು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಮತ್ತು ಕನ್ಯಾಡಿ ಸೇವಾನಿಕೇತನಕ್ಕೆ ಭೇಟಿ ನೀಡಿ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಾಮಗಾರಿಯನ್ನು ವೀಕ್ಷಿಸಿದರು. ಕಂಪನಿಯ CSRನ ಅನುದಾನ ಪತ್ರವನ್ನು ಹಸ್ತಾಂತರಿಸಿ ಕಟ್ಟಡ ನಿರ್ಮಾಣ ಶೀಘ್ರವಾಗಿ ನೆರವೇರುವಂತೆ ಶುಭಹಾರೈಸಿದರು.

ಈ ಸಂದರ್ಭದಲ್ಲಿ ಕೊಕ್ಕಡ, ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ಅಧ್ಯಕ್ಷರಾದ ಶ್ರೀ ಕೃಷ್ಣ ಭಟ್, ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು, ಆರೈಕೆದಾರರು ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.




# ಸಂಪನ್ನಗೊಂಡ 32ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ




ನೇಲ್ಯಡ್ಕ (ಜೂ.01): ಸೇವಾಭಾರತಿ (ರಿ.), ಕನ್ಯಾಡಿ ಇದರ ನೇತೃತ್ವದಲ್ಲಿ ಸಬಲಿನಿ ಯೋಜನೆಯಡಿ ಶಿವಾನಿ ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಮಹಿಳಾ ಒಕ್ಕೂಟ (ರಿ.), ಅರಸಿನಮಕ್ಕಿ ಇದರ ಸಹಭಾಗಿತ್ವದಲ್ಲಿ ಮಹಿಳೆಯರಿಗಾಗಿ ಉಚಿತ 32ನೇ ಟೈಲರಿಂಗ್ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ಜೂನ್ 1 ರಂದು ನೇಲ್ಯಡ್ಕದಲ್ಲಿ ನಡೆಯಿತು.

ಅರಸಿನಮಕ್ಕಿ ಶಿವಾನಿ ಸಂಜೀವಿನಿ ಮಹಿಳಾ ಒಕ್ಕೂಟದ ಅಧ್ಯಕ್ಷರಾದ ಶ್ರೀಮತಿ ಪ್ರತಿಮಾ ಮಾತನಾಡಿ ಜನರಿಗೆ ಸ್ವಉದ್ಯೋಗ ಮಾಡುವ ಅವಕಾಶವನ್ನು ಕಲ್ಪಿಸಿಕೊಟ್ಟಿರುವುದು ಬಹಳ ಸಂತೋಷದ ವಿಷಯ. ಕಲಿತಂತಹ ವಿದ್ಯೆಯನ್ನು ಅರ್ಧಕ್ಕೆ ಕೈಬಿಡದೆ ಮುಂದುವರಿಸಿಕೊಂಡು ಹೋಗಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಸೇವಾಭಾರತಿ ಕನ್ಯಾಡಿಯ ಅಧ್ಯಕ್ಷೆ ಹಾಗೂ ಬೆಳ್ತಂಗಡಿ ತಾಲೂಕು ಮಹಿಳಾ ಸಹಕಾರಿ ಸಂಘ ಇದರ ಸಿಇಒ ಶ್ರೀಮತಿ ಸ್ವರ್ಣಗೌರಿ ಟೈಲರಿಂಗ್ ಕಲಿಯುವುದರಿಂದ ಬೇರೆ ಬೇರೆ ರೀತಿಯ ಸ್ವ–ಉದ್ಯೋಗದ ಅವಕಾಶವಿರುತ್ತದೆ.

ಕಲಿತ ವಿದ್ಯೆ ಎಂದಿಗೂ ನಮಗೆ ಶಾಶ್ವತ ಮಹಿಳೆಯರು ಯಾವತ್ತಿಗೂ ಇನ್ನೊಬ್ಬರಿಗೆ ಅವಲಂಬಿತವಾಗದೆ ಸ್ವಾವಲಂಬಿ ಜೀವನವನ್ನು ನಡೆಸುವುದು ಅತ್ಯಗತ್ಯವೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಟೈಲರಿಂಗ್ ತರಬೇತುದಾರರಾದ ಶ್ರೀಮತಿ ಹರಿಣಾಕ್ಷಿ ಬಿ.ಪಿ. ಎಲ್ಲರಿಗೂ ಶುಭಹಾರೈಸಿ ಸಂತಸ ವ್ಯಕ್ತಪಡಿಸಿದರು. ನಮ್ಮ ಸಂಸ್ಥೆಯ ಪರವಾಗಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ನಂತರ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವನ್ನು ವಿತರಿಸಲಾಯಿತು.

ಅರಸಿನಮಕ್ಕಿ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರಾದ ಶ್ರೀ ನವೀನ ರೆಖ್ಯಾ, ಅರಸಿನಮಕ್ಕಿ ಶಿವಾನಿ ಸಂಜೀವಿನಿ ಮಹಿಳಾ ಒಕ್ಕೂಟದ ಮುಖ್ಯ ಪುಸ್ತಕ ಬರಹಗಾರರಾದ ಶ್ರೀಮತಿ ನೀತಾರಾಧೇಶ್ ಆಚಾರ್ಯ, ರೆಖ್ಯಾ ಮಾಜಿ ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ಮಾಲತಿ, ಸ್ಥಳೀಯ ಸಂಪನ್ಮೂಲ ವ್ಯಕ್ತಿ ಶ್ರೀಮತಿ ಹೇಮಲತಾ ಮತ್ತು ಕುಮಾರಿ ಅಮಿತ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಒಟ್ಟು 34 ಮಂದಿ ಶಿಬಿರಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಶ್ರೀಮತಿ ಹೇಮಲತಾ ಸ್ವಾಗತಿಸಿ, ಡಾಕ್ಯುಮೆಂಟೇಶನ್, ಮಾನಿಟರಿಂಗ್ ಮತ್ತು ಇವಲ್ಯೂವೇಟಿಂಗ್ ಕೋಆರ್ಡಿನೇಟರ್ ಸುಮ ಕಾರ್ಯಕ್ರಮ ನಿರೂಪಿಸಿ, ಶ್ರೀಮತಿ ಸ್ವಾತಿ ಧನ್ಯವಾದವಿತ್ತರು.


## ಸೇವಾಭಾರತಿಯಿಂದ ಡಾ. ಧನಂಜಯ ಸರ್ಜಿ ಅವರ ಭೇಟಿ



06 ಜೂನ್ 2025 ರಂದು ದಕ್ಷಿಣ ಪಶ್ಚಿಮ ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯರಾದ ಡಾ. ಧನಂಜಯ ಸರ್ಜಿ ಅವರನ್ನು ಭೇಟಿ ಮಾಡಿ ಸೇವಾಭಾರತಿ ಸೇವಾಧಾಮದ ಕಾರ್ಯಚಟುವಟಿಕೆಗಳನ್ನು ವಿವರಿಸಿ ಪ್ರಸ್ತುತ ಕರ್ನಾಟಕದಾದ್ಯಂತ ಇರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಅವಶ್ಯವಿರುವ ಪುನಶ್ಚೇತನ ಕೇಂದ್ರದ ನಿರ್ಮಾಣದ ಕುರಿತು ವಿವರಿಸಿ ಸದಸ್ಯರ ನಿಧಿಯಿಂದ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ಪುನಶ್ಚೇತನ ಕೇಂದ್ರಕ್ಕೆ ಸಹಕರಿಸುವಂತೆ ಮನವಿ ಹಸ್ತಾಂತರಿಸಲಾಯಿತು.

ಸದಸ್ಯರು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಸಿಗಬೇಕಾದ ಸೌಲಭ್ಯಗಳಿಗಾಗಿ ಸದನದಲ್ಲಿ ಧ್ವನಿಯೆತ್ತುವ ಮತ್ತು ಕಟ್ಟಡ ನಿರ್ಮಾಣಕ್ಕೆ ಸಹಕರಿಸುವ ಭರವಸೆ ನೀಡಿ ಸೇವಾಧಾಮ ಸೇವಾಭಾರತಿಯ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸಿ, ಈ ಮಹತ್ವದ ಸೇವಾಕಾರ್ಯವನ್ನು ಮುನ್ನಡೆಸುವ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಅವರನ್ನು ಗೌರವಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಟ್ರಸ್ಟಿ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ ಹಾಗೂ ಹಿತೈಷಿ ಶ್ರೀಮತಿ ಮಂಜುಳಾ ವಿ. ಪ್ರಸಾದ್ ಮತ್ತು ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ. ಉಪಸ್ಥಿತರಿದ್ದರು.

## ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ ಶ್ರೀ ಮಾರುತಿ ಗುರೂಜಿರವರಿಂದ ರೂ. 25,000 ದೇಣಿಗೆ



ಶ್ರೀ ಕ್ಷೇತ್ರ ಬಂಗಾರಮಕ್ಕಿ ಶ್ರೀ ವಿಶ್ವ ವೀರಾಂಜನೇಯ ಮಹಾ ಸಂಸ್ಥಾನಮ್, ಹೇಮಾಪುರ ಮಹಾಪೀಠಂನ ಶ್ರೀ ಮಾರುತಿ ಗುರೂಜಿಯವರನ್ನು ಜೂನ್ 23 ರಂದು ಭೇಟಿ ಮಾಡಿ ಸೇವಾಧಾಮ ಸೇವಾಭಾರತಿಯ ಸೇವಾಕಾರ್ಯಗಳ ಬಗ್ಗೆ ಅವರಿಗೆ ವಿವರಿಸಲಾಯಿತು. ಈ ಮಹತ್ವದ ಸೇವಾಕಾರ್ಯವನ್ನು ಮುನ್ನಡೆಸುವ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಅವರನ್ನು ಗೌರವಿಸಿ, ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕಾಗಿ ರೂ. 25,000/– ದೇಣಿಗೆಯನ್ನು ನೀಡಿ ಕಟ್ಟಡ ನಿರ್ಮಾಣ ಶೀಘ್ರ ನೆರವೇರುವಂತೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ. ಉಪಸ್ಥಿತರಿದ್ದರು.


## ಸೇವಾಧಾಮದಲ್ಲಿ ವಿಶ್ವ ಪರಿಸರ ದಿನಾಚರಣೆ





ವಿಶ್ವ ಪರಿಸರ ದಿನದ ಪ್ರಯುಕ್ತ ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮದಲ್ಲಿ ಸನಿವಾಸಿಗಳು, ಆರೈಕೆದಾರರು ಮತ್ತು ಸಿಬ್ಬಂದಿವರ್ಗದವರು ಗಿಡವನ್ನು ನೆಟ್ಟು ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು.

## ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ ಬಾಳ್ತಿಲದ ಶ್ರೀ ಕೆ. ಸೂರ್ಯರವರಿಂದ ರೂ. 15,000 ದೇಣಿಗೆ



(ಜೂನ್ 02): ಬಾಳ್ತಿಲ ಗ್ರಾಮದ, ದಾಸಕೋಡಿ ಶ್ರೀ ಕೆ. ಸೂರ್ಯ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಪುನಶ್ಚೇತನ ಕೇಂದ್ರದ ನೂತನ ಕಟ್ಟಡ ನಿರ್ಮಾಣಕ್ಕಾಗಿ ರೂ. 15,000/ – ದೇಣಿಗೆಯನ್ನು ನೀಡಿ ಕಟ್ಟಡದ ನಿರ್ಮಾಣ ಶೀಘ್ರ ನೆರವೇರುವಂತೆ ಶುಭ ಹಾರೈಸಿದರು. ಸೇವಾಭಾರತಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಮತ್ತು ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ. ದೇಣಿಗೆಯನ್ನು ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು.

## ಮಹನೀಯ ದಾನಿಗಳು

32ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ, ನೇಲ್ಯಡ್ಕ
ಶ್ರೀ ಕೆ. ಸೂರ್ಯ, ದಾಸಕೋಡಿ
ಶ್ರೀ ಬೋಪಣ್ಣ ಎಂ.ಕೆ, ಕೊಡಗು
ಶ್ರೀಮತಿ ಪೂರ್ಣಿಮಾ ಕೆ. ಭಟ್, ಕಡಬ
ಶ್ರೀ ವಿದ್ಯಾನಾಥ ಶೆಟ್ಟಿ, ನಂದಿಕೂರು
ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ
ಶ್ರೀ ಕೆ. ದಿನೇಶ್ ರಾವ್, ಧರ್ಮಸ್ಥಳ
ಶ್ರೀಮತಿ ಛಾಯಾ ಸಿ.ಎಸ್, ಉಜಿರೆ
ಶ್ರೀ ಎಸ್ ಗೋಪಾಲ ಉಡುಪ, ಬೆಂಗಳೂರು
ಶ್ರೀ ತುಂಗಪ್ಪ ಪೂಜಾರಿ, ಕೊಯ್ಯೂರ್
ಶ್ರೀ ಮಹಾದೇವ ಬೆಂಡೆ, ಮುಂಡಾಜೆ
ಶ್ರೀಮತಿ ಬೇಬಿ ಉಮೇಶ್, ಗುರಿಪಳ್ಳ
ಶ್ರೀಮತಿ ವಾಣಿಶ್ರೀ, ಇಂದಬೆಟ್ಟು
ಶ್ರೀ ಹೆಚ್.ಸಿ. ಮಹೇಶ್, ಚಿಕ್ಕಮಗಳೂರು
ಶ್ರೀ ಮಾರುತಿ ಗುರೂಜಿ, ಶಿರಸಿ
ಶ್ರೀ ವಿನಯ್ ಪರಮೇಶ್ವರ ಭಟ್, ಶಿರಸಿ
ಶ್ರೀ ಆನಂದ ಎಸ್, ತೀರ್ಥಹಳ್ಳಿ
ಶ್ರೀ ಶ್ರೀನಿಧಿ, ಕಡಿರುದ್ಯಾವಾರ
ಶ್ರೀ ನೂತನ್ ಜಿ, ಕಡಬ
ಶ್ರೀ ಸುಬ್ರಹ್ಮಣ್ಯ ರಾಮಚಂದ್ರ ಹೆಗ್ಡೆ, ಶಿರಸಿ
ಶ್ರೀ ಮಹೇಂದ್ರ ಸಿಂಗ್, ಮೈಸೂರು
ಶ್ರೀಮತಿ ಸುಲೋಚನಾ, ನೆಲ್ಯಾಡಿ
ಶ್ರೀ ಬಿ ರತ್ನಾಕರ್ ರಾವ್
ಶ್ರೀ ಎಸ್ ಕೆ ಮಂಜುನಾಥ್ ಭಟ್, ಬೆಂಗಳೂರು
ಶ್ರೀಮತಿ ಮಮತಾ ವಿಶ್ವನಾಥ್, ಅಮೆರಿಕಾ
ಶ್ರೀ ದಿನೇಶ್ ಸದಾಶಿವಂ, ಬೆಂಗಳೂರು
ಶ್ರೀ ಗಣೇಶ್ ಕೆ, ಕೊಕ್ಕಡ
ಶ್ರೀಮತಿ ಶಾಂತಿ, ಕಾರ್ಕಳ
ಬೇಬಿ ಶರಣ್ಯ ಎಸ್ ಎಚ್, ನೆಲ್ಲಿಕಾರು

## ಸೇವಾನಿಧಿ ದಾನಿಗಳು

ಶ್ರೀ ಬಾಲಸುಬ್ರಹ್ಮಣ್ಯ, ಬೆಂಗಳೂರು
ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು
ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
ಶ್ರೀಮತಿ ದಿವ್ಯಾ ಪುರಂದರ್, ಬೆಂಗಳೂರು
ಶ್ರೀ ಕೆ. ಪುರಂದರ ರಾವ್, ನಾರ್ಯ
ಶ್ರೀ ಕಾರ್ತಿಕ್ ಕೆ., ಕನ್ಯಾಡಿ
ಶ್ರೀ ಕೆ. ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ
ಶ್ರೀ ಪುರುಷೋತ್ತಮ ಡಿ.ಎ., ಧರ್ಮಸ್ಥಳ
ಶ್ರೀಮತಿ ಬಬಿತಾ, ಕನ್ಯಾಡಿ
ಮಾಸ್ಟರ್ ರಾಹುಲ್ ಪ್ರಭು, ಕನ್ಯಾಡಿ
ಶ್ರೀ ಅಣ್ಣು ದೇವಾಡಿಗ, ನೇತ್ರಾವತಿ
ಶ್ರೀ ಬಾಲಕೃಷ್ಣ ರಾವ್ ಕೆ., ಕನ್ಯಾಡಿ
ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ
ಡಾ. ರಾಮಕೃಷ್ಣ ಭಟ್ ಜಿ.ಎನ್, ಕನ್ಯಾಡಿ
ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ
ಶ್ರೀ ಮಧುಸೂಧನ್, ಉಜಿರೆ
ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ
ಶ್ರೀ ಕೆ. ಸೂರ್ಯನಾರಾಯಣ ರಾವ್, ದೊಂಡೋಲೆ
ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಉಡುಪಿ
ಶ್ರೀ ಕೆ. ರಮೇಶ್ ಪೂಜಾರಿ, ಕನ್ಯಾಡಿ
ಶ್ರೀ ನೀಲಕಂಠ, ನಾರ್ಯ
ಶ್ರೀ ಬಿ. ರಾಮದಾಸ್ ಭಂಡಾರ್ಕರ್, ಉಜಿರೆ
ಶ್ರೀ ಗಣೇಶ್ ಭಟ್, ಉಜಿರೆ
ಶ್ರೀ ಸಂತೋಷ್ ಕೆ., ಕೊಕ್ಕಡ
ಶ್ರೀ ಅಖಿಲೇಶ್ ಕೆ.ಎಲ್, ಪುತ್ತೂರು
ಶ್ರೀ ಸುನಿಲ್ ಕುಮಾರ್ ಜೈನ್, ದೊಂಡೋಲೆ
ಬೇಬಿಶ್ರೀ ಬಿಲ್ವನಿ, ಉಜಿರೆ
ಶ್ರೀ ಜಿ. ಪುಟ್ಟಸ್ವಾಮಿ, ಉಜಿರೆ
ಶ್ರೀ ಜಯಾನಂದ ಎಂ., ಕನ್ಯಾಡಿ
ಶ್ರೀ ಶಿವಕುಮಾರ್, ಉಜಿರೆ
ಶ್ರೀಮತಿ ಸವಿತಾ ಎಂ ರಾವ್, ಕನ್ಯಾಡಿ
ಹೋಟೆಲ್ ಬಾಂಬೆ ಡೈನ್, ಉಜಿರೆ
ಶ್ರೀ ಸುನಿಲ್ ಪಿ ಎನ್, ಕನ್ಯಾಡಿ
ಶ್ರೀ ರಜತ್ ಕುಮಾರ್ ಜೆ.ಡಿ., ವೇಣೂರು
ಶ್ರೀ ಬಿ. ಪುರಂದರ, ನಾರ್ಯ

## ವಸ್ತು ರೂಪದಲ್ಲಿ ದೇಣಿಗೆ

ಉಜಿರೆ ಹವ್ಯಕ ವಲಯ
ಶ್ರೀ ಸುಬ್ರಹ್ಮಣ್ಯ ರಾಮಚಂದ್ರ ಹೆಗ್ಡೆ, ಶಿರಸಿ

## ದೇಣಿಗೆ ನೀಡಿದ ಸಂಘ ಸಂಸ್ಥೆಗಳು

ಡಾ. ದಿನೇಶ್ ಹೆಗ್ಡೆ, ಮಹಾಲಕ್ಷ್ಮೀ ಮೆಮೋರಿಯಲ್ ಮನೋರಮಾ ಡಯಾಗ್ನೋಸ್ಟಿಕ್ ಸೆಂಟರ್, ಶಿರಸಿ

*The world worries about disability more than disabled people do*

## ಬೆಂಗಳೂರಿನ ಬಾಷ್ ಕಂಪೆನಿಯ ತಂಡವು ಸೇವಾನಿಕೇತನಕ್ಕೆ ಭೇಟಿ



ಬೆಂಗಳೂರಿನ ಬಾಷ್ ಕಂಪೆನಿಯ ಎ.ಆರ್. ಮ್ಯಾನೇಜರ್ ಶ್ರೀ ಪ್ರದೀಪ್ ಮತ್ತು ತಂಡದವರು ಜೂನ್ 05 ರಂದು ಕನ್ಯಾಡಿ ಸೇವಾನಿಕೇತನಕ್ಕೆ ಭೇಟಿ ನೀಡಿ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಾಮಗಾರಿಯನ್ನು ವೀಕ್ಷಿಸಿದರು. ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗತೆ ಮತ್ತು ನಿರ್ವಹಣೆ ಬಗ್ಗೆ ಅವರಿಗೆ ಮಾಹಿತಿ ನೀಡಲಾಯಿತು.

ಈ ಸಂದರ್ಭದಲ್ಲಿ ವೇಣೂರು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಐಟಿಐನ ಪ್ರಾಂಶುಪಾಲರಾದ ಶ್ರೀ ವಿಶ್ವೇಶ್ವರ ಪ್ರಸಾದ್, ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

## ಸೇವಾಭಾರತಿಯಿಂದ ಎ.ಎನ್. ರಮೇಶ ಕೆ.ಎಲ್.ಎಸ್.ರವರ ಭೇಟಿ



ಬೆಂಗಳೂರಿನ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಇದರ ಜಂಟಿ ಕಾರ್ಯದರ್ಶಿ ಶ್ರೀ ಎ. ಎನ್.ರಮೇಶ ಕೆ.ಎಲ್.ಎಸ್.ವರನ್ನು ಜೂನ್ 03 ರಂದು ಭೇಟಿ ಮಾಡಿ ಸೇವಾಧಾಮ ಮಾಡುತ್ತಿರುವ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಸಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಕೆಲಸದ ಅಥವಾ ಇತರ ಸಂದರ್ಭದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾಗಿ ಅಂಗವಿಕಲತೆ ಉಂಟಾಗುವವರ ಶ್ರೇಯಸ್ಸಿಗೆ ಮಂಡಳಿ ವತಿಯಿಂದ ವಿವಿಧ ಯೋಜನೆಗಳನ್ನು ಜಾರಿಗೆ ತರುವಂತೆ ಮನವಿ ಮಾಡಲಾಯಿತು.

# 33ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಉದ್ಘಾಟನೆ



ಸೇವಾಭಾರತಿ (ರಿ.), ಕನ್ಯಾಡಿ, ಇದರ ನೇತೃತ್ವದಲ್ಲಿ, ಸಬಲಿನಿ ಯೋಜನೆಯಡಿ, ಗ್ರಾಮ ಪಂಚಾಯತ್, ಅರಸಿನಮಕ್ಕಿ, ಹತ್ಯಡ್ಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ಅರಸಿನಮಕ್ಕಿ ಇದರ ಸಹಭಾಗಿತ್ವದಲ್ಲಿ ಮಹಿಳೆಯರಿಗಾಗಿ 33ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭವು ತುಂಬೆತ್ತಡ್ಕ ರಾಣೆಯರ್ ಸಭಾಭವನದಲ್ಲಿ ನಡೆಯಿತು.

ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಅರಸಿನಮಕ್ಕಿ ಹತ್ಯಡ್ಕ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ (ನಿ.) ಅಧ್ಯಕ್ಷರಾದ ಶ್ರೀ ರಾಘವೇಂದ್ರ ನಾಯಕ್ ಬರ್ಗುಳ ಚಾಲನೆ ನೀಡಿ ಈ ಉಚಿತ ತರಬೇತಿ ಶಿಬಿರವು ಸ್ವ–ಉದ್ಯೋಗದ ಕಡೆಗೆ ಮಹತ್ವದ ಹೆಜ್ಜೆಯಾಗಲಿ ಎಂದು ಶುಭಹಾರೈಸಿದರು.

ಸೇವಾಭಾರತಿ ಕನ್ಯಾಡಿಯ ಅಧ್ಯಕ್ಷರಾದ ಹಾಗೂ ಬೆಳ್ತಂಗಡಿ ತಾಲೂಕು ಮಹಿಳಾ ಸಹಕಾರಿ ಸಂಘದ ಸಿಇಒ ಸ್ವರ್ಣಗೌರಿ ಮಾತನಾಡಿ, ಟೈಲರಿಂಗ್ ಕಲಿಕೆ ಅನೇಕ ಉದ್ಯೋಗದ ಅವಕಾಶಗಳನ್ನು ಒದಗಿಸಬಲ್ಲದು. ಸ್ವಉದ್ಯೋಗವನ್ನು ಕಲಿತರೆ ನಮ್ಮ ಜೀವನವನ್ನು ನಾವೇ ರೂಪಿಸಿಕೊಂಡು ಸಮಾಜದಲ್ಲಿ ಬೆಳಗಬಹುದು ಎಂದರು.

ಈ ಸಮಾರಂಭದಲ್ಲಿ, ತುಂಬೆತ್ತಡ್ಕ ಶ್ರೀ ಕಾಲಭೈರವೇಶ್ವರ ಸ್ವಾಮಿ ಮತ್ತು ಶ್ರೀ ಮಾರಿಯಮ್ಮ ದೇವಸ್ಥಾನದ ಅಧ್ಯಕ್ಷರಾದ ಶ್ರೀ ಸುರೇಶ್ ವಿ., ಅರಸಿನಮಕ್ಕಿ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಶ್ರೀ ಸುಧೀರ್ ಎಂ. ಎಸ್, ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್, ಅರಸಿನಮಕ್ಕಿ ಹತ್ಯಡ್ಕ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ (ನಿ.), ನಿರ್ದೇಶಕರಾದ ಶ್ರೀಮತಿ ಬೇಬಿ, ಕನ್ಯಾಡಿ ಶ್ರೀ ದುರ್ಗಾ ಮಾತೃ ಮಂಡಳಿ ಖಜಾಂಚಿ ಶ್ರೀಮತಿ ಬಬಿತಾ, ಅರಸಿನಮಕ್ಕಿ ಶಿವಾನಿ ಸಂಜೀವಿನಿ ಮಹಿಳಾ ಒಕ್ಕೂಟದ ಮುಖ್ಯ ಪುಸ್ತಕ ಬರಹಗಾರರಾದ ಶ್ರೀಮತಿ ನೀತಾ ರಾಧೇಶ್ ಆಚಾರ್ಯ, ಟೈಲರಿಂಗ್ ತರಬೇತುದಾರರಾದ ಶ್ರೀಮತಿ ಪ್ರತಿಮಾ ಇವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಶಿಬಿರದಲ್ಲಿ ಒಟ್ಟು 40 ಮಂದಿ ಮಹಿಳಾ ಶಿಬಿರಾರ್ಥಿಗಳು ಭಾಗವಹಿಸಿದ್ದು, ಮಹಿಳಾ ಸಬಲೀಕರಣದತ್ತ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ. ಕಾರ್ಯಕ್ರಮದಲ್ಲಿ ಶ್ರೀಮತಿ ಸುನಂದಾ ಸ್ವಾಗತಿಸಿ, ಸೇವಾಭಾರತಿಯ ಡಾಕ್ಯುಮೆಂಟೇಶನ್, ಮೋನಿಟರಿಂಗ್ ಮತ್ತು ಇವ್ಯಾಲ್ಯೂಯೇಷನ್ ಕೋ–ಆರ್ಡಿನೇಟರ್ ಸುಮ ನಿರೂಪಿಸಿದರು. ಶ್ರೀಮತಿ ಆಶಾ ವಂದಿಸಿದರು.

## ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ ಡಾ. ದಿನೇಶ್ ಹೆಗ್ಗಡೆಯವರಿಂದ ರೂ. 10,000 ದೇಣಿಗೆ



ಶಿರಸಿಯ ಮಹಾಲಕ್ಷ್ಮಿ ಮೆಮೋರಿಯಲ್ ಆಸ್ಪತ್ರೆ, ಮನೋರಮಾ ಡಯಾಗ್ನೋಸ್ಟಿಕ್ಸ್ ಸೆಂಟರ್‌ನ ಡಾ. ದಿನೇಶ್ ಹೆಗ್ಗಡೆಯವರನ್ನು ಜೂನ್ 25 ರಂದು ಭೇಟಿ ಮಾಡಲಾಯಿತು. ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಪುನಶ್ಚೇತನ ಕೇಂದ್ರದ ನೂತನ ಕಟ್ಟಡ ನಿರ್ಮಾಣಕ್ಕಾಗಿ ರೂ. 10,000/– ದೇಣಿಗೆಯನ್ನು ನೀಡಿ ಕಟ್ಟಡದ ನಿರ್ಮಾಣ ಶೀಘ್ರ ನೆರವೇರುವಂತೆ ಶುಭಹಾರೈಸಿದರು. ಸೇವಾಭಾರತಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಮತ್ತು ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ. ದೇಣಿಗೆಯನ್ನು ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು.

## ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ 32ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಶಿಬಿರಾರ್ಥಿಗಳಿಂದ ರೂ. 3,000 ದೇಣಿಗೆ



ನೇಲ್ಯಡ್ಕ (ಜೂ. 01): ನೇಲ್ಯಡ್ಕದಲ್ಲಿ ನಡೆದ 32ನೇ ಉಚಿತ ಟೈಲರಿಂಗ್ ಶಿಬಿರದ ಸಮಾರೋಪ ಸಮಾರಂಭದ ವೇಳೆ ತರಬೇತುದಾರರಾದ ಶ್ರೀಮತಿ ಹರಿಣಾಕ್ಷಿ ಬಿ.ಪಿ. ಮತ್ತು ಅರಸಿನಮಕ್ಕಿ ಶಿವಾನಿ ಸಂಜೀವಿನಿ ಮಹಿಳಾ ಒಕ್ಕೂಟದ ಮುಖ್ಯ ಪುಸ್ತಕ ಬರಹಗಾರರು ಶ್ರೀಮತಿ ನೀತಾ ರಾಧೇಶ್ ಆಚಾರ್ಯ ಮತ್ತು 34 ಮಂದಿ ಶಿಬಿರಾರ್ಥಿಗಳು ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 3,000 ಮೊತ್ತವನ್ನು ನೀಡಿ ಸಹಕರಿಸಿದ್ದಾರೆ.

## ಸೇವಾಧಾಮದಲ್ಲಿ ಹುಟ್ಟುಹಬ್ಬ ಆಚರಣೆ




ಕಡಿರುದ್ಯಾವರ ಗ್ರಾಮದ ಶ್ರೀನಿಧಿ ಅವರ ಪುತ್ರಿ ಬೇಬಿ ಧೃತಿ ಅವರ ಹುಟ್ಟುಹಬ್ಬವನ್ನು ಸೌತಡ್ಕದ ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರದಲ್ಲಿ ಸನಿವಾಸಿಗಳಿಗೆ ಮತ್ತು ಆರೈಕೆದಾರರಿಗೆ ಒಂದು ಹೊತ್ತಿನ ಊಟವನ್ನು ನೀಡುವುದರೊಂದಿಗೆ ಜೂನ್ 08 ರಂದು ಸಮಾಜಕ್ಕೆ ಮಾದರಿಯಾಗುವಂತೆ ಹುಟ್ಟುಹಬ್ಬ ಆಚರಿಸಿಕೊಂಡರು. ಬೇಬಿ ಧೃತಿ ಇವರಿಗೆ ಸಂಸ್ಥೆಯ ಪರವಾಗಿ ಶುಭ ಹಾರೈಸಲಾಯಿತು. ಈ ಸಂದರ್ಭದಲ್ಲಿ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.




ಶ್ರೀ ಮಹಾದೇವ ಬೆಂಡೆ ಅವರ ಹುಟ್ಟುಹಬ್ಬವನ್ನು ಸೌತಡ್ಕದ ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ರೂ. 5000/– ದೇಣಿಗೆಯನ್ನು ನೀಡುವುದರೊಂದಿಗೆ ಜೂನ್ 20 ರಂದು ಸಮಾಜಕ್ಕೆ ಮಾದರಿಯಾಗುವಂತೆ ಹುಟ್ಟುಹಬ್ಬ ಆಚರಿಸಿಕೊಂಡರು. ಶ್ರೀ ಮಹಾದೇವ ಬೆಂಡೆ ಇವರಿಗೆ ಸಂಸ್ಥೆಯ ಪರವಾಗಿ ಶುಭಹಾರೈಸಲಾಯಿತು. ಈ ಸಂದರ್ಭದಲ್ಲಿ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.




ಕಡಬ ತಾಲೂಕಿನ ಶ್ರೀ ಗಣಪತಿ ಭಟ್‌ರವರ ಪುತ್ರ ನೂತನ ಭಟ್‌ರವರ ಹುಟ್ಟುಹಬ್ಬವನ್ನು ಸೌತಡ್ಕದ ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರದಲ್ಲಿ ಸನಿವಾಸಿಗಳಿಗೆ ಮತ್ತು ಆರೈಕೆದಾರರಿಗೆ ಒಂದು ಹೊತ್ತಿನ ಊಟವನ್ನು ನೀಡುವುದರೊಂದಿಗೆ ಜೂನ್ 20 ರಂದು ಸಮಾಜಕ್ಕೆ ಮಾದರಿಯಾಗುವಂತೆ ಹುಟ್ಟುಹಬ್ಬ ಆಚರಿಸಿಕೊಂಡರು. ಶ್ರೀ ನೂತನ್ ಭಟ್‌ರವರಿಗೆ ಸಂಸ್ಥೆಯ ಪರವಾಗಿ ಶುಭಹಾರೈಸಲಾಯಿತು. ಈ ಸಂದರ್ಭದಲ್ಲಿ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.



ಮೂಡಬಿದ್ರಿ ತಾಲೂಕಿನ ಶ್ರೀ ಸಂತೋಷ ಹಾಗೂ ಶ್ರೀಮತಿ ಹರಿಣಾಕ್ಷಿ ದಂಪತಿಗಳ ಪುತ್ರಿ ಶರಣ್ಯ ಎಸ್. ಹೆಚ್. ಅವರ ಹುಟ್ಟುಹಬ್ಬವನ್ನು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಜೂನ್ 30 ರಂದು ಭೇಟಿ ನೀಡಿ ಸನಿವಾಸಿಗಳಿಗೆ ಮತ್ತು ಆರೈಕೆದಾರರಿಗೆ ಒಂದು ಹೊತ್ತಿನ ಊಟಕ್ಕಾಗಿ ರೂ. 5000/– ದೇಣಿಗೆಯನ್ನು ನೀಡಿ ಹುಟ್ಟುಹಬ್ಬವನ್ನು ವಿಶೇಷ ರೀತಿಯಲ್ಲಿ ಆಚರಿಸಿಕೊಂಡಿದ್ದಾರೆ.

ಬೇಬಿ ಶರಣ್ಯ ಎಸ್. ಎಚ್. ಇವರಿಗೆ ಸಂಸ್ಥೆಯ ಪರವಾಗಿ ಶುಭ ಹಾರೈಸಲಾಯಿತು. ಈ ಸಂದರ್ಭದಲ್ಲಿ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

# ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಬೆನ್ನೆಲುಬಾಗುವಿರಾ?

## ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿದೆ ನೂತನ "ಸೇವಾಧಾಮ" ಪುನಶ್ಚೇತನ ಕೇಂದ್ರ





ಸೇವಾಭಾರತಿ ಸಂಸ್ಥೆಯು ಕಳೆದ 20 ವರ್ಷಗಳಲ್ಲಿ ಸಾಮಾಜಿಕವಾಗಿ ಅನೇಕ ಕ್ಷೇತ್ರಗಳಲ್ಲಿ ಸೇವಾ ಕಾರ್ಯ –ಗಳನ್ನು ಮಾಡುತ್ತ ಬರುತ್ತಿದ್ದು, ಸಬಲಿನಿ ಯೋಜನೆಯಡಿ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಉಚಿತ ಟೈಲರಿಂಗ್ ತರಬೇತಿಗಳು, ಆರೋಗ್ಯಮ್ ಯೋಜನೆಯಡಿ ಆಂಬುಲೆನ್ಸ್ ಸೇವೆ ಹಾಗೂ ರಕ್ತದಾನ ಶಿಬಿರಗಳು, ಸೇವಾಧಾಮ ಯೋಜನೆ –ಯಡಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ, ಈ ಮೂರು ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದೆ.

ನಮ್ಮ ಸಂಸ್ಥೆಯ ಸಮಾಜಮುಖಿ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ಯಾಡಿಯಲ್ಲಿ 2023ನೇ ವರ್ಷದಲ್ಲಿ ಸರ್ಕಾರವು ಒಟ್ಟು 10 ಸೆಂಟ್ಸ್ ಜಮೀನನ್ನು ನಮ್ಮ ಸಂಸ್ಥೆಯ ಕಟ್ಟಡ ನಿರ್ಮಾಣ ಉದ್ದೇಶಕ್ಕಾಗಿ ಮಂಜೂರುಗೊಳಿಸಿದೆ. ಪ್ರಸಕ್ತ ವರ್ಷದಲ್ಲಿ ಸೇವಾಭಾರತಿಯ ಕಾರ್ಯಚಟುವಟಿಕೆಗಳಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರದ ಉದ್ದೇಶಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಅಲ್ಲದೆ ಧನಸಹಾಯ ನೀಡುವಂತೆ ಬೇರೆ ಬೇರೆ ಸಂಸ್ಥೆಗಳಿಗೆ ಮನವಿಯನ್ನೂ ಮಾಡಿದ್ದೇವೆ. ಈ ಮನವಿಗೆ ಸ್ಪಂದಿಸಿ ಮುಂಬರುವ ದಿನಗಳಲ್ಲಿ ಕಿಂಚಿತ್ತಾದರೂ ಸಿಗಬಹುದೆಂಬ ಆಶಾವಾದದಲ್ಲಿ ನಾವಿದ್ದೇವೆ. ನಮ್ಮ ಸಂಸ್ಥೆಯ ಕಟ್ಟಡದ ನಿರ್ಮಾಣಕ್ಕಾಗಿ ಒಟ್ಟು ಮೊತ್ತ ರೂ 3,05,72,580/– ಅಂದಾಜಿಸಲಾಗಿದ್ದು, ಇದರ ಮೊದಲ ಹಂತವಾಗಿ ನೆಲಮಹಡಿಗೆ ಮಂಗಳೂರಿನ Mangalore Refinery and petrochemicals Limited (MRPL) ನಿಂದ ರೂಪಾಯಿ 42 ಲಕ್ಷದಷ್ಟು ಮಂಜೂರಾಗಿದ್ದು ಒಂದು ವರ್ಷದ ಅವಧಿಯೊಳಗೆ ನಿರ್ಮಾಣ ಮಾಡಬೇಕಾಗಿದೆ. ಆದರೆ ಅಡಿಪಾಯ ಹಾಗೂ ಬೇಸ್ಮೆಂಟ್‌ನಲ್ಲಿ ಶೌಚಾಲಯ, ಒಂದು ಸೆಕ್ಯೂರಿಟಿ ರೂಮ್, ಸಂಪು ಹಾಗೂ ಪಾರ್ಕಿಂಗ್ ವ್ಯವಸ್ಥೆಗಳನ್ನು ನಿರ್ಮಾಣ ಮಾಡಬೇಕಿದೆ. ಇದಕ್ಕಾಗಿ ಒಟ್ಟು 60 ಲಕ್ಷ ರೂಪಾಯಿಗಳಷ್ಟು ವೆಚ್ಚವಾಗಲಿದೆ.

ಈವರೆಗೂ ತಾವು ನಮ್ಮ ಎಲ್ಲಾ ಯೋಜನೆಗಳಿಗೂ ಕೈಲಾದಷ್ಟು ಸಹಾಯ ನೀಡುತ್ತಿದ್ದು, ಈ ಬಾರಿ ಈ ಕಟ್ಟಡ ಕಟ್ಟಲು ಸಹಾಯ ನೀಡುವಿರೆಂದು ಭಾವಿಸಿದ್ದೇವೆ. ಈ ಕಟ್ಟಡವು ನಿರ್ಮಾಣಗೊಂಡು ಕಾರ್ಯಾಚರಿಸಲು ಪ್ರಾರಂಭಿಸಿದ್ದಲ್ಲಿ ರಾಜ್ಯದಾದ್ಯಂತವಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾಗಿ ಮಾದರಿಯಾದ ಪುನಶ್ಚೇತನ ಕೇಂದ್ರವಾಗುವುದರಲ್ಲಿ ಸಂಶಯವಿರುವುದಿಲ್ಲ. ಆದಕಾರಣ ನಮ್ಮ ಸಂಸ್ಥೆಗೆ ಧನಸಹಾಯ ನೀಡಿ ಈ ಯೋಜನೆಯನ್ನು ಯಶಸ್ವಿ–ಗೊಳಿಸಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯ ವಿನಂತಿ.

> ಒಟ್ಟು ಮೊತ್ತ ರೂ. 3,05,72,580/– ಅಂದಾಜಿಸಲಾಗಿದ್ದು. ಇದರ ನೆಲಮಹಡಿಗೆ ಮಂಗಳೂರಿನ MRPL ರೂ. 42 ಲಕ್ಷದಷ್ಟು ನೀಡಲಿದೆ.

### BANK ACCOUNT DETAILS

SEVABHARATHI REGD

237887292400920@cnrb

Scan & Pay also

A/c Name : Sevabharathi
Current A/c No : 120000400920
IFSC : CNRB0010246
Canara Bank, Dharmasthala Branch

*Disability cannot stop me from becoming a complete personality*

## ಸೇವಾಭಾರತಿಯಿಂದ ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳ ಭೇಟಿ



ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಶ್ರೀ ಸೋಂದಾಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನದ ಪರಮಪೂಜ್ಯ ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳನ್ನು ಜೂನ್ 25 ರಂದು ಭೇಟಿ ಮಾಡಲಾಯಿತು. ಸೇವಾಧಾಮ ಸೇವಾಭಾರತಿಯ ಸೇವಾಕಾರ್ಯಗಳ ಬಗ್ಗೆ ಅವರಿಗೆ ವಿವರಿಸಿ ಶಿರಸಿ ತಾಲೂಕಿನ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಿಕೊಡುವಂತೆ ವಿನಂತಿಸಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್, ಶಿರಸಿ ಸ್ಕ್ಯಾನ್ ಸೆಂಟರ್‌ನ ಶ್ರೀ ಮಣಿಕಂಠ, ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ., ಉತ್ತರ ಕನ್ನಡ ಜಿಲ್ಲೆಯ ಕ್ಷೇತ್ರ ಸಂಯೋಜಕರಾದ ಶ್ರೀ ಸುಧಾಕರ ಪೂಜಾರಿ, ಉಡುಪಿ ಜಿಲ್ಲೆಯ ಕ್ಷೇತ್ರ ಸಂಯೋಜಕರಾದ ಶ್ರೀ ಮನೋಜ್ ಶೆಟ್ಟಿ ಉಪಸ್ಥಿತರಿದ್ದರು.

## ಪ್ರಕರ್ಷ ಅಕಾಡೆಮಿಯಿಂದ ಭೇಟಿ



ಬೆಂಗಳೂರಿನ ಪ್ರಕರ್ಷ ಅಕಾಡೆಮಿಯ ಆರೋಹಣಂ ಕಾರ್ಯಕ್ರಮದಡಿಯಲ್ಲಿ ಸೇವಾಭಾರತಿಯು 1 ವರ್ಷದ ತರಬೇತಿಯನ್ನು ಪಡೆದುಕೊಂಡಿದ್ದು, ಸಂಸ್ಥೆಯ ಬೆಳವಣಿಗೆಯ ಉದ್ದೇಶಕ್ಕಾಗಿ ಅಕಾಡೆಮಿಯ ಶ್ರೀ ಸುದರ್ಶನ ಮತ್ತು ಕು. ಕೀರ್ತನ ಎಸ್.ರವರು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಮತ್ತು ಸಂಸ್ಥೆಯ ಕಾರ್ಯಾಲಯ ಕನ್ಯಾಡಿ ಸೇವಾನಿಕೇತನಕ್ಕೆ ಜೂನ್ 27 ರಂದು ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಮತ್ತು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು, ಆರೈಕೆದಾರರು ಮತ್ತು ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪುನಶ್ಚೇತನವನ್ನು ಪಡೆದುಕೊಂಡು ಜೂನ್ ತಿಂಗಳಲ್ಲಿ ಡಿಸ್ಚಾರ್ಜ್ ಆದವರು



ಶ್ರೀ ಪರಮೇಶ್ವರ್, ಕೊಡಗು



ಶ್ರೀ ಸುಬ್ರಮಣ್ಯ ರಾಮಚಂದ್ರ ಹೆಗ್ಗಡೆ, ಶಿರಸಿ

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ಪ್ರಕಾಶ್ ಆದ ನಾನು ಉಡುಪಿ ಜಿಲ್ಲೆಯ ಬೈಂದೂರು ತಾಲೂಕಿನ ದರ್ಖಾಸ್ತ. ಕಾಲೋನಿಯಿಂದ ಬಿದ್ದು T/5 ಇಂಜ್ಯುರಿಯಾಗಿರುತ್ತೇನೆ ನಾನು ಕುಂದಾಪುರದ ಚಿನ್ಮಯಿ ಆಸ್ಪತ್ರೆಗೆ ಮೊದಲು ಭೇಟಿಯಾಗಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಆದರ್ಶ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದಿರುತ್ತೇನೆ.

ಕ್ಷೇತ್ರ ಸಂಯೋಜಕರಾದ ಶಶಾಂತ್ ಎಸ್.ರವರು ನನ್ನ ಮನೆಗೆ ಭೇಟಿ ನೀಡಿ ಸೇವಾಧಾಮದ ಸಲಹೆ ನೀಡಿರುತ್ತಾರೆ. ಆಮೇಲೆ ಸೇವಾಧಾಮಕ್ಕೆ ದಿನಾಂಕ 06/11/2023 ರಂದು ಬಂದಿರುತ್ತೇನೆ. 2 ತಿಂಗಳು ಥೆರಪಿಯನ್ನು ನನಗೆ ತುಂಬಾ ಚೆನ್ನಾಗಿ ಹೇಳಿಕೊಟ್ಟಿರುತ್ತಾರೆ. ನಾನು ಬರುವಾಗ ಮಲಗಿದ ಸ್ಥಿತಿಯಲ್ಲಿ ಬಂದಿರುತ್ತೇನೆ ಸೇವಾಧಾಮಕ್ಕೆ ಬಂದ ನಂತರ ಯೋಗ ಮತ್ತೆ ಥೆರಪಿಯನ್ನು ಚೆನ್ನಾಗಿ ಮಾಡಿ ನನ್ನ ಕೆಲಸವನ್ನು ನಾನೇ ಮಾಡಿಕೊಳ್ಳುತ್ತೇನೆ.

ಹಾಗೂ ನನಗೆ ಮುಂದೆ ಬರುವ ಸಮಸ್ಯೆಗಳ ಬಗ್ಗೆ ಇಲ್ಲಿ ಅರಿವು ಮಾಡಿಸಿರುತ್ತಾರೆ. ಇದೆಲ್ಲಕೂ ಅವಕಾಶ ಮಾಡಿಕೊಟ್ಟ ಸೇವಾಭಾರತಿಯ ಅಧ್ಯಕ್ಷರು, ಸಂಸ್ಥಾಪಕರು, ಕಾರ್ಯದರ್ಶಿಗಳು, ಹಾಗೂ ಸಿಬ್ಬಂದಿವರ್ಗದವರಿಗೆ ನನ್ನ ಧನ್ಯವಾದಗಳು.

ಇತಿ ನಿಮ್ಮ ವಿಶ್ವಾಸಿ

**ಪ್ರಕಾಶ**

*I dont need easy, I just need possible*

## ಕಾರ್ಕಳದ ವಿಶೇಷಚೇತನ ಶಾಲೆಗೆ ಸೇವಾಭಾರತಿಯಿಂದ ಭೇಟಿ




ಕಾರ್ಕಳದ ಶ್ರೀ ಗುರುರಾಘವೇಂದ್ರ ಸೇವಾ ಟ್ರಸ್ಟ್(ರಿ.) ವಿಜೇತ ವಸತಿಯುತ ವಿಶೇಷ ಶಾಲೆ ಮತ್ತು ವೃತ್ತಿಶಿಕ್ಷಣ ತರಬೇತಿ ಸಂಸ್ಥೆಯ ಸಂಸ್ಥಾಪಕರಾದ ಡಾ. ಕಾಂತಿ ಹರೀಶ್‌ರವರನ್ನು ಮತ್ತು ವಿಶೇಷಚೇತನ ವಿದ್ಯಾರ್ಥಿಗಳನ್ನು ಜೂನ್ 23 ರಂದು ಭೇಟಿ ಮಾಡಿ ಸೇವಾಧಾಮ ಸೇವಾಭಾರತಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಲಾಯಿತು. ಈ ಮಹತ್ವದ ಸೇವಾಕಾರ್ಯವನ್ನು ಮುನ್ನಡೆಸುವ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್‌ರವರನ್ನು ಶಾಲೆಯ ಪರವಾಗಿ ಗೌರವಿಸಿದರು. ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರು ಮತ್ತು ಸೇವಾಭಾರತಿ ಸಂಸ್ಥೆಯ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ. ಉಪಸ್ಥಿತರಿದ್ದರು.

## ಫಲಾನುಭವಿಯಿಂದ ಸೇವಾಧಾಮಕ್ಕೆ ದೇಣಿಗೆ



ಉತ್ತರಕನ್ನಡ ಜಿಲ್ಲೆ, ಶಿರಸಿಯ ಬೆನ್ನುಹುರಿ ಅಪಘಾತಕ್ಕೊಳಗಾದ ಶ್ರೀ ಸುಬ್ರಮಣ್ಯ ರಾಮಚಂದ್ರ ಹೆಗ್ಡೆ ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ 65 ದಿನಗಳ ಪುನಶ್ಚೇತನವನ್ನು ಪಡೆದುಕೊಂಡು ಇಂದು ಸೇವಾ ಧಾಮ ದಿಂದ ಡಿಸ್ಚಾರ್ಜ್ ಆಗುವ ಸಂದರ್ಭದಲ್ಲಿ ಸೇವಾಧಾಮದ ಕಾರ್ಯ ಚಟುವಟಿಕೆಗಳಿಗೆ ರೂ. 5001/– ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಇವರ ಮುಂದಿನ ಜೀವನ ಸುಖಕರವಾಗಿರಲಿ ಎಂದು ಶುಭಹಾರೈಸೋಣ.

## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಫಲಾನುಭವಿಗಳಿಗೆ ವೈದ್ಯರಿಂದ ಸಮಾಲೋಚನೆ



ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪ್ರತಿ ತಿಂಗಳು ಫಲಾನುಭವಿಗಳಿಗೆ ನಡೆಸುವಂತಹ ವೈದ್ಯರ ಸಮಾಲೋಚನೆಯಲ್ಲಿ ಜೂನ್ ತಿಂಗಳಿನಂದು ಮಂಗಳೂರು ಕೆಎಂಸಿ ಆಸ್ಪತ್ರೆಯ ಸ್ಪೈನ್ ಶಸ್ತ್ರಚಿಕಿತ್ಸಕರು ಡಾ। ವೈಶಾಕ್ ಭಟ್ ಸೇವಾಧಾಮಕ್ಕೆ ಭೇಟಿ ನೀಡಿದ್ದರು. ಫಲಾನುಭವಿಗಳನ್ನು ಪರೀಕ್ಷೆ ಮಾಡಿ ಅವರ ಆರೋಗ್ಯದ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಮಾಲೋಚನೆಯಲ್ಲಿ 7 ಮಂದಿ ಫಲಾನುಭವಿಗಳು ಭಾಗವಹಿಸಿದ್ದರು.

# ಸೇವಾ ಸಂಗಮ

(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಆನ್ಲೈನ್ ಕಾರ್ಯಾಗಾರ - 34 )

**ಬೆನ್ನುಹುರಿ ಅಪಘಾತಕ್ಕೊಳಗಾದ ನಂತರ ಜೀವನ ಪುನರ್ ನಿರ್ಮಾಣ , ಪುನಶ್ಚೇತನ, ತಂತ್ರಜ್ಞಾನ ಮತ್ತು ಸಮುದಾಯ**

**ಸಂಪನ್ಮೂಲ ವ್ಯಕ್ತಿ**



**ಡಾ. ಹೀನಾ ನವಾಝ್ ಪಿ.ಟಿ**

ಸ್ಥಾಪಕ ಅಧ್ಯಕ್ಷರು, ಶಿಫಾ ಫೌಂಡೇಶನ್ ಮತ್ತು ನಿರ್ದೇಶಕರು, ಫಿಸಿಯೋಎಡ್ವಾನ್ಸ್

ದಿನಾಂಕ : 14/06/2025

ಸಮಯ : 4pm to 5pm


Live On : Google Meet

https://meet.google.com/kes-fufm-mwx

ಸೇವಾಭಾರತಿ ಕನ್ಯಾಡಿ -II

9945491241

www.sevaabharathi.org




ಜೂನ್ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಡಾ. ಹೀನಾ ನವಾಝ್ ಪಿ.ಟಿ ಇವರು ಬೆನ್ನುಹುರಿ ಅಪಘಾತಕ್ಕೊಳಗಾದ ನಂತರ ಜೀವನ ಪುನರ್ ನಿರ್ಮಾಣ, ಮತ್ತು ತಂತ್ರಜ್ಞಾನದ ಬಗ್ಗೆ ಮಾಹಿತಿ ನೀಡಿದರು. ಕಾರ್ಯಾಗಾರದಲ್ಲಿ ಒಟ್ಟು 46 ಮಂದಿ ಭಾಗವಹಿಸಿದ್ದರು.

## ಜೂನ್ ತಿಂಗಳ ಸೇವಾ ಕಾರ್ಯಗಳು

1. ಸೆಲ್ಫ್‌ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್ – 15

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ದೇಣಿಗೆಯನ್ನು
ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ.
ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...



ಶ್ರೀ ಬಾಲಕೃಷ್ಣ ನೈಮಿಷ
ಕನ್ಯಾಡಿ



ಮಾಸ್ಟರ್ ಭಾರ್ಗವ
ಕೃಷ್ಣ, ಕೊಕ್ಕಡ



ಶ್ರೀಮತಿ ಚಂದನ್
ಚವನ್, ಮುಂಬೈ



ಛಾಯ ಸಿ.ಎಸ್
ಉಜಿರೆ



ಶ್ರೀ ಧನೆಂದ್ರ
ಧರ್ಮಸ್ಥಳ



ಶ್ರೀ ಗಣೇಶ್ ಗೌಡ
ಕಲಾಯಿ, ಕೊಕ್ಕಡ



ಶ್ರೀ ಜಯಾನಂದ ಎಂ
ಕನ್ಯಾಡಿ –2



ಶ್ರೀ ಕಿರಣ್ ರಾಜ್ ಕೆ.
ಉಜಿರೆ



ಶ್ರೀಮತಿ ಕ್ಷಮ
ಭಾರದ್ವಜ್, ಬೆಂಗಳೂರು



ಶ್ರೀ ನೂತನ ಜಿ
ಕಡಬ



ಶ್ರೀ ಸಂತೋಷ್ ಕೆ.
ಕೊಕ್ಕಡ



ಮಾಸ್ಟರ್ ಸೋಹಮ್
ಉಡುಪ, ಬೆಂಗಳೂರು




ಶ್ರೀ ಸುಧಾಕರ್
ಪೂಜಾರಿ, ಶಿರಸಿ



ಬೇಬಿ ತ್ರಿಶಿಕಾ ಎನ್.
ಇಂದಬೆಟ್ಟು



ಶ್ರೀಮತಿ ವಸಂತಿ ಗೌಡ
ಬೊಳ್ಮ



ಶ್ರೀ ವಿಕಿತ್ ಗುರಿಪಳ್ಳ
ಉಜಿರೆ



ಶ್ರೀ ಪುರುಷೋತ್ತಮ್.ಡಿ.ಎ
ಧರ್ಮಸ್ಥಳ




ಶ್ರೀ ಕೆ.ಎಸ್.ಮಂಜುನಾಥ್
ರಾಮನಗರ



ಶ್ರೀ ಸಹಜ್ ರೈ
ಪುತ್ತೂರು




ಶ್ರೀ ಕೆ. ಕೃಷ್ಣ ಭಟ್
ಕೊಕ್ಕಡ



ಬೇಬಿ ಶರಣ್ಯ ಎಸ್.ಎಚ್
ನೆಲ್ಲಿಕಾರ್



ಶ್ರೀ ದಿನೇಶ್ ಮತ್ತು ಶ್ರೀಮತಿ
ಮಧುರಾಣಿ, ಬೆಂಗಳೂರು



ಶ್ರೀ ವಿಜಯ ಕೊಡವೂರು
ಮತ್ತು ಶ್ರೀಮತಿ ಪ್ರೀತಿ

## ನಿಮಗಿದು ತಿಳಿದಿರಲಿ

# ಸ್ಪೈನಾಬಿಫಿಡಾ (Spina Bifida) ಎಂದರೆ ಏನು?

ಸ್ಪೈನಾಬಿಫಿಡಾ ಒಂದು ಜನ್ಮಜಾತ (congenital) ಕಾಯಿಲೆ ಆಗಿದ್ದು, ಇದು ಶಿಶು ಗರ್ಭದಲ್ಲಿದ್ದಾಗವೇ ಉಂಟಾಗುತ್ತದೆ. ಈ ಸ್ಥಿತಿಯಲ್ಲಿ ಮೂಳೆಮಜ್ಜೆ (Spinal cord) ಹಾಗೂ ಹಿಮಜ್ಜೆ (Spinal column) ಸಂಪೂರ್ಣವಾಗಿ ರೂಪುಗೊಳ್ಳದೆ ತೆರೆದಂತೆ ಉಳಿಯುತ್ತದೆ. ಇದು ನಿಯೂರಲ್ ಟ್ಯೂಬ್ ಡಿಫೆಕ್ಟ್ (Neural tube defect) ಎಂದು ಕರೆಯಲ್ಪಡುವ ಸಮಸ್ಯೆಗಳಲ್ಲಿ ಒಂದಾಗಿದೆ.

## ನಮ್ಮ ಯೋಜನೆಗಳು

**ಆರೋಗ್ಯಮ್ :** ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ :** ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ :** ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ & ಮೆಡಿಕಲ್ ಕಿಟ್‌ಗಳು

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

## DONATE & JOIN US IN OUR MISSION

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

## Support us for constructions of Rehabilitation Centre

| | |
|---|---|
| A/c Holder | - M/s. Sevabharathi(R) |
| A/C NUMBER | - 120000400920 |
| IFSC CODE | - CNRB0010246 |
| BANK TYPE | - CURRENT ACCOUNT |

*We are put in situations to build our character... not destroy us*

# ಸ್ವ–ಉದ್ಯೋಗ ಬದುಕಿಗೆ ಹೊಸ ಆಯಾಮ ನೀಡಿದ "ಸೇವಾಧಾಮ."

# ಶಿರಸಿಯ ವಿನಯಭಟ್‌ರವರ ಯಶೋಗಾಥೆ

ವಿನಯ ಭಟ್‌ರವರು ಮೂಲತಃ ಶಿರಸಿ ತಾಲೂಕಿನ ದೇವತೆ ಮನೆ ಗ್ರಾಮದ ನಿವಾಸಿಯಾಗಿದ್ದು, 4 ಜೂನ್ 1985 ರಲ್ಲಿ ದಿ. ಪರಮೇಶ್ವರ ಎಂ. ಭಟ್ ಮತ್ತು ಶ್ರೀಮತಿ ಗೌರಿ ಪಿ. ಭಟ್ ದಂಪತಿಯ ಪುತ್ರರಾಗಿ ಜನಿಸಿದರು. ಮೇಲಿನ ಒನಿಕೇರಿಯಲ್ಲಿ ಪ್ರಾಥಮಿಕ ಶಿಕ್ಷಣ ತದನಂತರ ಲಕ್ಷ್ಮೀನರಸಿಂಹ ಪಾಠಶಾಲಾ ಸಾಲ್ಕನಿಯಲ್ಲಿ ಪ್ರಥಮ ಕಾವ್ಯಸಾಹಿತ್ಯ ಶಿಕ್ಷಣವನ್ನು ಮತ್ತು ಭನುಮಯ್ಯ ಕಾಲೇಜಿನಲ್ಲಿ ಪಿಯುಸಿ ಶಿಕ್ಷಣವನ್ನು ಪಡೆದು ಮೈಸೂರಿನ ಮಹಾಜನ ಕಾಲೇಜಿನಲ್ಲಿ B.com ಶಿಕ್ಷಣವನ್ನು ಪಡೆದುಕೊಂಡರು. ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದ ನಂತರ 2 ವರ್ಷ ಬೆಂಗಳೂರಿನಲ್ಲಿ ಕಾಲ್ ಸೆಂಟರ್‌ನಲ್ಲಿ ಕೆಲಸವನ್ನು ಮಾಡಿ ತದನಂತರ ಬೆಂಗಳೂರಿನಲ್ಲಿಯೇ ಪುರೋಹಿತರಾಗಿ ತನ್ನ ಕೆಲಸವನ್ನು ಮುಂದುವರಿಸಲು ಪ್ರಾರಂಭಿಸಿದರು. ಅದರ ಜೊತೆಗೆ ತನ್ನ ಊರಿನಲ್ಲಿ ಸಭೆ ಸಮಾರಂಭವನ್ನು ನಡೆಸಲು ಸಭಾಂಗಣವೊಂದನ್ನು ಪ್ರಾರಂಭಿಸಿ ಅದನ್ನು ನೋಡಿಕೊಳ್ಳಲು ಪರಿಚಯದವರಿಗೆ ಕೊಟ್ಟಿದ್ದರು.

ತನ್ನ ವೃತ್ತಿಯನ್ನು ಮಾಡುತ್ತ ಜೀವನವನ್ನು ಸಾಗಿಸುತ್ತಿದ್ದ ವಿನಯ ಭಟ್ 1 ಆಗಸ್ಟ್ 2018 ರಂದು ಬೆಂಗಳೂರಿನಲ್ಲಿ ಎಂದಿನಂತೆ ಪುರೋಹಿತ ಕೆಲಸವನ್ನು ಮುಗಿಸಿ ಮನೆಗೆ ವಾಪಾಸಾಗುವ ವೇಳೆಯಲ್ಲಿ ವಿನಯ್ ಅವರ ಜೀವನದಲ್ಲಿಯೇ ಮರೆಯಲಾಗದ ಘಟನೆ ನಡೆದುಹೋಯಿತು. ಪೂಜೆಯನ್ನು ಮುಗಿಸಿ ಸರಿಸುಮಾರು ರಾತ್ರಿ 8:30 ರ ವೇಳೆಗೆ ಬೈಕ್‌ನಲ್ಲಿ ಬರುತ್ತಿರುವಾಗ ಸ್ಕಿಡ್ ಆಗಿ ಹೊಂಡಕ್ಕೆ ಬಿದ್ದು ಕೆಳಕ್ಕೆಬಿದ್ದರು. ಈ ಆಕ್ಸಿಡೆಂಟ್ ಅವರ ಜೀವನದ ದಿಕ್ಕನ್ನೇ ಬದಲಾಯಿಸಿಬಿಟ್ಟಿತು. ತಕ್ಷಣ ಅವರನ್ನು ಬೆಂಗಳೂರಿನಲ್ಲಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಮುಂದಿನ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಕೆ.ಎಸ್. ಹೆಗ್ಡೆ ಆಸ್ಪತ್ರೆಗೆ ಬಂದರು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಸಂದರ್ಭದಲ್ಲಿ ಅಕ್ಸಿಡೆಂಟ್‌ನಿಂದ ಅವರ ಒಂದು ಕಾಲು ಜಜ್ಜಿಹೋಗಿತ್ತು ಹೆಚ್ಚಿನ ಚಿಕಿತ್ಸೆಯನ್ನು ಮಾಡಲು ಸಾಧ್ಯವಾಗದೆ ಕಾಲನ್ನು ತುಂಡರಿಸುವ ಪರಿಸ್ಥಿತಿಯೂ ಎದುರಾಯಿತು ಇದರ ಜೊತೆಗೆ ಅವರು ಬೆನ್ನುಹುರಿ ಅಪಘಾತಕ್ಕೂ ಒಳಗಾಗಿದ್ದರು. ಬೆನ್ನುಹುರಿ ಅಪಘಾತ ಎಂದರೆ ಏನು? ಅದು ಯಾವ ರೀತಿ ಪರಿಣಾಮ ಬೀಳುತ್ತದೆ ಎಂಬ ವಿಷಯವೂ ತಿಳಿಯದ ವಿನಯ್ ಅವರಿಗೆ ಆಸ್ಪತ್ರೆಯಲ್ಲಿ ಸ್ವಲ್ಪಸ್ವಲ್ಪವಾಗಿ ವಿಷಯವನ್ನು ತಿಳಿಸಿದರು. ಇನ್ನು ಮುಂದೆ ನಡೆದಾಡಲು ಸಾಧ್ಯವಿಲ್ಲ ಹಾಗೂ ಗಾಲಿಕುರ್ಚಿಯ ಮುಖಾಂತರ ಮಾತ್ರ ಚಲಿಸಲು ಸಾಧ್ಯವೆಂದು ಮನವರಿಕೆ ಮಾಡಿದರು. ಆಸ್ಪತ್ರೆಯಲ್ಲಿಯೇ ಇದ್ದು 3 ತಿಂಗಳ ಚಿಕಿತ್ಸೆಯನ್ನು ಪಡೆದುಕೊಂಡರು. ಚಿಕಿತ್ಸೆಯನ್ನು ಪಡೆದ ನಂತರ 5 ವರ್ಷಗಳ ಕಾಲ ಮಲಗಿದಲ್ಲೇ ತನ್ನ ಜೀವನವನ್ನು ಹಾಸಿಗೆಯಲ್ಲೇ ಕಳೆದರು. ಎಳೆಯ ವಯಸಿನಲ್ಲೇ ಆದಂತಹ ಈ ದುರ್ಘಟನೆ ಅವರ ಮನಸನ್ನೇ ಆವರಿಸಿಬಿಟ್ಟಿತ್ತು. ಇನ್ನು ನನ್ನಿಂದ ಏನೂ ಮಾಡಲು ಸಾಧ್ಯವಾಗದು ನನ್ನ ಜೀವನ ಇಲ್ಲಿಗೆ ಮುಗಿದು ಹೋಯಿತು ಎಂದು ಆಸೆಯನ್ನೇ ಬಿಟ್ಟಿದ್ದ ವಿನಯ್ ಭಟ್ ಅವರಿಗೆ ಪರಿಚಯವಾದದ್ದು "ಸೇವಾಧಾಮ."

ಹೆಗ್ಗಡೆ ಕಟ್ಟೆಯ ಬೆನ್ನುಹುರಿ ಅಪಘಾತಕ್ಕೊಳಗಾದ ಶ್ರೀ ದಿನೇಶ್ ಹೆಗ್ಗಡೆಯವರ ಮುಖಾಂತರ ಸೇವಾಧಾಮದ ಪರಿಚಯ ಮಾಡಿಕೊಂಡು ಭೇಟಿ ನೀಡಿದರು. ನಂತರ ಪುನಶ್ಚೇತನವನ್ನು ಪಡೆದುಕೊಂಡು ಒತ್ತಡಗಾಯವನ್ನು ಹೇಗೆ ನಿವಾರಣೆ ಮಾಡಬೇಕು, ವೀಲ್ ಚೇರ್‌ನಿಂದ



ಹೇಗೆ ಶಿಫ್ಟ್ ಆಗೋದು ಎಂಬುದರ ಬಗ್ಗೆ ತಿಳಿದುಕೊಂಡು ಸ್ವಲ್ಪ ಚೇತರಿಸಿಕೊಳ್ಳುತ್ತ ಬಂದರು. ಬೆನ್ನುಹುರಿ ಅಪಘಾತದ ಬಗ್ಗೆ ಏನೂ ತಿಳಿಯದ ವಿನಯ್ ಭಟ್‌ರವರು ನಿಧಾನವಾಗಿ ಎಲ್ಲಾ ವಿಷಯದ ಬಗ್ಗೆ ತಿಳಿದುಕೊಳ್ಳಲು ಪ್ರಾರಂಭಿಸಿದರು. ಸೇವಾಧಾಮ ಇಲ್ಲದೆ ಇರ್ತಿದ್ರೆ ನಾನು ಇಷ್ಟು ಚೇತರಿಸಿಕೊಂಡು ಹೀಗೆ ಇರಲು ಸಾಧ್ಯವೇ ಆಗುತ್ತಿರಲಿಲ್ಲ. ಪುನಶ್ಚೇತನವನ್ನು ಪಡೆದುಕೊಳ್ಳುವ ಮೊದಲು ನನ್ನ ಕೆಲಸವನ್ನು ನಾನು ಮಾಡಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಇವಾಗ ನನ್ನ ಕೆಲಸವನ್ನು ನಾನು ಮಾಡಿಕೊಳ್ಳುವಷ್ಟು ಚೇತರಿಸಿಕೊಂಡಿದ್ದೇನೆ ಎಂದು ಸಂತೋಷವನ್ನು ವ್ಯಕ್ತಪಡಿಸಿದರು. ಸೇವಾಧಾಮದಲ್ಲಿ ಪುನಶ್ಚೇತನವನ್ನು ಪಡೆದುಕೊಂಡ ನಂತರ ದೇವತೆಮನೆಯಲ್ಲಿ ಮುಂಚೆಯಿಂದಲೂ ಮಾಡಿಕೊಂಡು ಬಂದಂತಹ ಸಭಾಂಗಣದ ಕೆಲಸವನ್ನು ಮತ್ತೆ ಪ್ರಾರಂಭಿಸಿದರು. ಸಮಾರಂಭದ ವೇಳೆ ಸಭಾಂಗಣದಲ್ಲಿ ಕಾಂಟ್ರಾಕ್ಟ್ ತೆಗೆದುಕೊಂಡು ಎಲ್ಲಾ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಿಕೊಡುತ್ತ ಮುನ್ನಡೆಸಿಕೊಂಡು ಹೋಗುತ್ತ ತಿಂಗಳಿಗೆ ರೂ. 15,000/– ದಷ್ಟು ಸಂಪಾದನೆ ಮಾಡುತ್ತ ಸ್ವಾವಲಂಬಿ ಜೀವನ ಸಾಗಿಸಿ ಎಲ್ಲರಿಗೂ ಸ್ಫೂರ್ತಿಯಾಗುವಂತೆ ಬದುಕು ರೂಪಿಸಿ ಕೊಂಡಿದ್ದಾರೆ. ಶುಭ ಹಾರೈಸೋಣ ಅವರಿಗೆ.

ಮೊಬೈಲ್ ಸಂಖ್ಯೆ : 9019635014